3

ಕರ್ನಾಟಕ ಸರ್ಕಾರ

ಸಂಖ್ಯೆ:ತಾಂ.ಆಡಳಿತ.ಸುತ್ತೋಲೆ. 16 /08-09

ಆಯುಕ್ತರ ಕಛೇರಿ
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು
ದಿನಾಂಕ: 3.4.09

## ಸುತ್ತೋಲೆ

ವಿಷಯ : 11ಇ ನಕ್ಷೆಗಳ ದುರಸ್ತಿ ಕೆಲಸ ಪೂರೈಸಲು ಅನುಸರಿಸಬೇಕಾದ ಕ್ರಮಗಳು

*****

ತಾಲ್ಲೂಕು ಕಛೇರಿಗಳಲ್ಲಿ ಸಂಯೋಜಿತ ಮ್ಯುಟೇಷನ್ ಪೋಡಿ ಅಳವಡಿಸುವ ಪೂರ್ವದಲ್ಲಿ ವಿತರಣೆಯಾಗಿದ್ದು, ಇದುವರೆವಿಗೂ ದುರಸ್ತಿ ಪೂರೈಸದಿರುವ 11ಇ ನಕ್ಷೆಗಳನ್ನು ದುರಸ್ತಿ ಪಡಿಸುವ ವಿಧಾನ :

ಮ್ಯುಟೇಷನ್ ಪೂರ್ವ ನಕ್ಷೆ ವಿತರಿಸಲು ಪ್ರಾರಂಭಿಸಿದಾಗಿನಿಂದಲೂ ದುರಸ್ತಿ ಪ್ರಕ್ರಿಯೆಗೆ ಒಳಪಡದ ವಿತರಿಸಿರುವ 11ಇ ನಕ್ಷೆ ಕಡತ ವಿವರ ಹಾಗೂ ಈ ಅವಧಿಯ 'ಭೂಮಿ' ಯಲ್ಲಿ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಟ್ಟಿರುವ ಪ್ರಕರಣಗಳ ಪಟ್ಟಿಯನ್ನು ಪಡೆಯಬೇಕಾಗಿರುತ್ತದೆ. ಇವುಗಳನ್ನು ಈ ಕೆಳಗಿನಂತೆ ಕ್ರಮ ಜರುಗಿಸಿ ಸಿದ್ಧಪಡಿಸಬಹುದಾಗಿರುತ್ತದೆ/ಪಡೆಯಬಹುದಾಗಿರುತ್ತದೆ.

ವಿತರಣೆಯಾಗಿದ್ದು, ಇದುವರೆವಿಗೂ ದುರಸ್ತಿ ಒಳಪಡದ 11ಇ ನಕ್ಷೆಗಳ ಪಟ್ಟಿ :

- ತಾಲ್ಲೂಕು ಭೂಮಾಪನ ಕಛೇರಿಗಳಲ್ಲಿ 11ಇ ನಕ್ಷೆ ಕೋರಿ ಬಂದ ಅರ್ಜಿಗಳ ಬಾಬ್ತು ಅರ್ಜಿ ಬಂದ ದಿನಾಂಕದಿಂದ ದುರಸ್ತಿಯಾಗುವವರೆಗೆ ಚಲನವಲನವನ್ನು 'ಕೀ ರಿಜಿಸ್ಟರ್' ನಲ್ಲಿ ದಾಖಲಿಸಿರುತ್ತದೆ.

- ತಾಲ್ಲೂಕು ಭೂಮಾಪನ ಕಛೇರಿಗಳಲ್ಲಿ ವಿತರಣೆಯಾಗಿದ್ದು, ಇದುವರೆಗೆ ದುರಸ್ತಿಯಾಗಿರದ 11ಇ ನಕ್ಷೆ ಕಡತಗಳನ್ನು ಕೀ ರಿಜಿಸ್ಟರ್ ನಂಬರ್ ಪರಿಶೀಲಿಸಿ ಗ್ರಾಮವಾರು / ವರ್ಷವಾರು ವಿಂಗಡಿಸಿಕೊಳ್ಳಬೇಕು.

11ಇ ವಿತರಣೆ ಪ್ರಾರಂಭಿಸಿದಾಗಿನಿಂದಲೂ 'ಭೂಮಿ'ಯಲ್ಲಿ ಮ್ಯುಟೇಷನ್ ಆಗಿರುವ ಪ್ರಕರಣಗಳ ಪಟ್ಟಿ :

- ತಾಲ್ಲೂಕು ಕಛೇರಿಯಲ್ಲಿ 11ಇ ನಕ್ಷೆ ವಿತರಣೆ ಪ್ರಾರಂಭಿಸಿದಾಗಿನಿಂದ ಇದುವರೆಗೆ 'ಭೂಮಿ' ಯಲ್ಲಿ ಹಕ್ಕು ಬದಲಾವಣೆ/ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಟ್ಟಿರುವ ಪ್ರಕರಣಗಳ ಪಟ್ಟಿಯನ್ನು ಗ್ರಾಮವಾರು, ವರ್ಷವಾರು ಪಡೆಯಬೇಕು.

SSLR 11E sketch
G

ಈ ರೀತಿಯಾಗಿ ಮ್ಯುಟೇಷನ್ ಆಗಿರುವ ಕಡತಗಳನ್ನು ಪ್ರತ್ಯೇಕಿಸಿದ ನಂತರ ಈ ಕಡತಗಳ ಬಾಬ್ತು ಮ್ಯುಟೇಷನ್ ಆದೇಶವನ್ನು ಪರಿಶೀಲಿಸಿದರೆ

1) ಮ್ಯುಟೇಷನ್ ಅಂಗೀಕರಿಸಿರುವ ಕಡತಗಳು ಮತ್ತು
2) ಮ್ಯುಟೇಷನ್ ತಿರಸ್ಕಾರಗೊಂಡಿರುವ ಕಡತಗಳನ್ನು ಪ್ರತ್ಯೇಕಿಸಿ. ಗುರುತಿಸಬಹುದಾಗಿರುತ್ತದೆ.

ಈ ರೀತಿಯಾಗಿ ವಿತರಣೆಯಾಗಿರುವ 11ಇ ನಕ್ಷೆಗಳನ್ನು 2 ಪ್ರಮುಖ ಗುಂಪುಗಳಾಗಿ ವಿಂಗಡಿಸಿ / ಪ್ರತ್ಯೇಕಿಸಬೇಕು :

(1) <u>ಇದುವರೆವಿಗೂ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಡದಿರುವ 11ಇ ನಕ್ಷೆ ಕಡತಗಳು</u>

ಭೂಮಾಪನ ಶಾಖೆಯಿಂದ ವಿತರಣೆಯಾಗಿದ್ದು, ಇದುವರೆಗೆ ದುರಸ್ತಿ ಆಗದಿರುವ 11 ಇ ನಕ್ಷೆಗಳ ಪಟ್ಟಿ ಹಾಗೂ ತಾಲ್ಲೂಕು ಭೂಮಾಪನ ಕಛೇರಿಯಿಂದ 11ಇ ನಕ್ಷೆ ವಿತರಣೆ ಮಾಡಲು ಪ್ರಾರಂಭಿಸಿದಾಗಿನಿಂದಲೂ ಇದುವರೆಗೆ 'ಭೂಮಿ'ಯಲ್ಲಿ ಮ್ಯುಟೇಷನ್ ಆಗಿರುವ ಪ್ರಕರಣಗಳ ಪಟ್ಟಿಗಳನ್ನು ಒಂದಕ್ಕೆ ಒಂದನ್ನು ತಾಳೆ ಮಾಡಿ ನೋಡಿದರೆ,

1) ತಾಲ್ಲೂಕು ಭೂಮಾಪನ ಶಾಖೆಯಿಂದ 11ಇ ನಕ್ಷೆ ವಿತರಣೆಯಾಗಿದ್ದು, ಇದುವರೆಗೂ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಡದಿರುವ ಕಡತಗಳನ್ನು ಗುರುತಿಸಿ ಪ್ರತ್ಯೇಕಿಸಬೇಕು.

ಮೇಲೆ ವಿವರಿಸಿದಂತೆ ಪ್ರತ್ಯೇಕಿಸಿದ ನಂತರ, ಇದುವರೆಗೆ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಡದಿರುವ ಪ್ರಕರಣಗಳನ್ನು (11ಇ ನಕ್ಷೆಗಳ) ವಿಲೇ ಪಡಿಸಬೇಕಾಗಿರುತ್ತದೆ.

ಈ ಕಡತಗಳ ಮೇಲೆ ಈ ಕೆಳಗಿನಂತೆ ಷರಾ ದಾಖಲಿಸುತ್ತ ವಿಲೇ ಪಡಿಸಬೇಕಾಗಿರುತ್ತದೆ.

<u>ಷರಾ</u> : 'ಈ __________ಕಡತದ ಬಾಬ್ತು 11ಇ ನಕ್ಷೆ ವಿತರಣೆಯಾದ ದಿನಾಂಕ ____________ರಿಂದ ದಿನಾಂಕ ____________ ದವರೆಗು 11ಇ ನಕ್ಷೆಯನ್ನು ಬಳಸಿಕೊಂಡು ವಹಿವಾಟು ಮಾಡಿರುವ ಬಗ್ಗೆ ಯಾವುದೇ ಮಾಹಿತಿ ಸ್ವೀಕೃತವಾಗದಿರುವ ಕಾರಣ ಈ ಪ್ರಕರಣವನ್ನು ದುರಸ್ತಿ ಮಾಡದೇ ವಿಲೇ ಪಡಿಸಲಾಗಿದೆ.'

ಮೇಲೆ ವಿವರಿಸಿರುವ ಇದುವರೆಗೆ ದುರಸ್ತಿಗೆ ಒಳಪಡದಿರುವ 11 ಇ ನಕ್ಷೆ ಕಡತಗಳ ಬಗ್ಗೆ :-

'11ಇ ನಕ್ಷೆ ವಿತರಣೆಯಾಗಿದ್ದು ಇದುವರೆಗೆ ಕ್ರಯ/ವಿಕ್ರಯಕ್ಕೆ ಒಳಪಡದೆ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಡದಿರುವ ಕಡತಗಳ ಪಟ್ಟಿಯನ್ನು ಉಪನೋಂದಣಾಧಿಕಾರಿಗಳಿಗೆ ಕಳುಹಿಸುವುದು ಮತ್ತು ಈ ನಕ್ಷೆಗಳನ್ನು ಇನ್ನು ಮುಂದೆ ನೋಂದಣಿಗೆ ಹಾಜರುಪಡಿಸಿದಲ್ಲಿ ಮನ್ನಣೆ ನೀಡಬಾರದಾಗಿ ಸೂಚಿಸುವುದು.'

<u>(2)</u> ಭೂಮಾಪನ ಶಾಖೆಯಿಂದ ವಿತರಣೆಯಾಗಿದ್ದು, ಇದುವರೆಗೆ ದುರಸ್ತಿ ಆಗದಿರುವ 11 ಇ ನಕ್ಷೆಗಳ ಪಟ್ಟಿ ಹಾಗೂ ತಾಲ್ಲೂಕು ಭೂಮಾಪನ ಕಛೇರಿಯಿಂದ 11ಇ ನಕ್ಷೆ ವಿತರಣೆ ಮಾಡಲು

ಪ್ರಾರಂಭಿಸಿದಾಗಿನಿಂದಲೂ ಇದುವರೆಗೆ 'ಭೂಮಿ'ಯಲ್ಲಿ ಮ್ಯುಟೇಷನ್ ಆಗಿರುವ ಪ್ರಕರಣಗಳ ಪಟ್ಟಿಗಳನ್ನು ಒಂದಕ್ಕೆ ಒಂದನ್ನು ತಾಳೆ ಮಾಡಿ ನೋಡಿದರೆ,

ಮ್ಯುಟೇಷನ್ ಕಡತಗಳಲ್ಲಿ ಅಂಗೀಕರಿಸಿರುವ ಮತ್ತು ತಿರಸ್ಕರಿಸಿರುವ ಮ್ಯುಟೇಷನ್ ಗಳನ್ನು ಅದರಂತೆ 11ಇ ನಕ್ಷೆಗಳ ಕಡತಗಳನ್ನು ಪ್ರತ್ಯೇಕಿಸಿಕೊಳ್ಳಬೇಕು.

<u>(2ಎ) ಮ್ಯುಟೇಷನ್ ತಿರಸ್ಕರಿಸಿರುವ ಪ್ರಕರಣಗಳು :</u>

ಮ್ಯುಟೇಷನ್ ತಿರಸ್ಕರಿಸಿರುವ ಪ್ರಕರಣಗಳ ಬಗ್ಗೆ ಸಂಬಂಧಿಸಿದ 11ಇ ನಕ್ಷೆ ಕಡತಗಳಲ್ಲಿ (ಟಿಪ್ಪಣಿ , ಪಕ್ಕಾ, 11ಇ ನಕ್ಷೆ) ಈ ಕೆಳಗಿನಂತೆ ಷರಾ ಬರೆದು ಪ್ರಕರಣ ವಿಲೇ ಪಡಿಸಬೇಕು.

ಷರಾ : 'ಈ _____________ 11ಇ ನಕ್ಷೆ ಪ್ರಕರಣದ ಮ್ಯುಟೇಷನ್ ಆದೇಶ _____________ ರನ್ವಯ ಮ್ಯುಟೇಷನ್ ತಿರಸ್ಕರಿಸಿರುವ ಕಾರಣ 11ಇ ಕಡತದ ಬಾಬ್ತು ದುರಸ್ತಿಗೆ ರಹವಿರದ ಕಾರಣ ವಿಲೇ ಪಡಿಸಿದೆ.'

<u>(2ಬಿ) ಮ್ಯುಟೇಷನ್ ಅಂಗೀಕಾರವಾಗಿರುವ ಕಡತಗಳ ಬಾಬ್ತು 11ಇ ಕಡತಗಳನ್ನು ದುರಸ್ತಿಪಡಿಸುವ ಬಗ್ಗೆ :</u>

(1) ಇಂತಹ ಕಡತಗಳಲ್ಲಿ ದಾಖಲಾಗಿರುವ 11ಇ ನಕ್ಷೆಯಲ್ಲಿ ಗುರುತಿಸಿರುವ ಕ್ರಯದಾರ / ಹಕ್ಕುಕಳೆದುಕೊಳ್ಳುವವರು ಮತ್ತು ಕ್ರಯಿಕ್ಕೆ ಪಡೆದವರು / ಹಕ್ಕುಪಡೆದವರು ಮತ್ತು ಮ್ಯುಟೇಷನ್ ರಿಜಿಸ್ಟರ್ ನಲ್ಲಿ ದಾಖಲಿಸಿರುವ ವಿವರಗಳನ್ನು ಈ ಕೆಳಗಿನ ಪಟ್ಟಿ-1ರಲ್ಲಿ ದಾಖಲಿಸುವುದು :

ಪಟ್ಟಿ –1

| ವಿಷಯ | | ವಿತರಿಸಿರುವ 11ಇ ನಕ್ಷೆ ಯಂತೆ | ಕ್ರಯಿದ ದಾಖಲೆ (ಹಕ್ಕುಬದಲಾವಣೆ) |
|---|---|---|---|
| ಹೋಬಳಿ | | | |
| ಗ್ರಾಮ | | | |
| ಸರ್ವೆ ನಂಬರು | | | |
| ವಿಸ್ತೀರ್ಣ | | | |
| ಕ್ರಯದಾರ | | | |
| ಕ್ರಯಿಕ್ಕೆ ಪಡೆದವರು | | | |
| ಚೆಕ್ಕುಬಂದಿ | ಉ | | |
| | ದ | | |
| | ಪೂ | | |
| | ಪ | | |

11ಇ ನಕ್ಷೆ ಮತ್ತು ಕ್ರಯದ ದಾಖಲೆಗಳಲ್ಲಿ ಈ ಮೇಲ್ಕಂಡ ಪಟ್ಟಿ-1ರಲ್ಲಿ ದಾಖಲಿಸಿರುವ ಅಂಶಗಳನ್ನು ಪರಿಶೀಲಿಸಬೇಕು. ಈ ಅಂಶಗಳಲ್ಲಿ ಯಾವುದಾದರೂ ಒಂದು ಅಂಶವು ವ್ಯತ್ಯಾಸವಿದ್ದಲ್ಲಿ ಅಂತಹ 11ಇ ಪ್ರಕರಣಗಳನ್ನು ಈ ಕೆಳಗಿನಂತೆ ಷರಾ ದಾಖಲಿಸಿ ವಿಲೇ ಪಡಿಸಬೇಕು.

ಷರಾ : '11ಇ ನಕ್ಷೆಯಲ್ಲಿ ದಾಖಲಾಗಿರುವ ______________ ಮತ್ತು ಕ್ರಯದಂತೆ ದಾಖಲಾಗಿರುವ ______________ ಅಂಶಗಳಲ್ಲಿ ವ್ಯತ್ಯಾಸವಿರುವ ಕಾರಣ ದುರಸ್ತಿಪಡಿಸಲು ರಹವಿರುವುದಿಲ್ಲ. ಆದ ಕಾರಣ ಕಡತವನ್ನು ವಿಲೇ ಪಡಿಸಿದೆ.'

(೨ಬಿ) 11ಇ ನಕ್ಷೆ ಮತ್ತು ಕ್ರಯದ ದಾಖಲೆಗಳಲ್ಲಿ ಮೇಲ್ಕಂಡ ಪಟ್ಟಿ -1 ರಂತೆ ಎಲ್ಲಾ ಮಾಹಿತಿಗಳು ತಾಳೆಯಾದಲ್ಲಿ 11ಇ ನಕ್ಷೆ ವಿತರಣೆ ಮಾಡಿರುವ ಪಹಣಿಯು ಪೈಕಿ ಪಹಣಿ ಯೇ ಅಥವಾ ಆಕಾರಬಂದಿನಂತೆ ಸರಿಯಾದ ಸರ್ವೆ ನಂಬರಿಗೆ ಸಂಬಂಧಿಸಿದ ಪಹಣಿಯೆಂದು ಪರಿಶೀಲಿಸುವುದು. ಈ ಬಗ್ಗೆ ವಿತರಿಸಿರುವ 11ಇ ನಕ್ಷೆಯ ಆಕಾರಬಂದ್ ಸರ್ವೆ ನಂಬರ್ ಮತ್ತು 11ಇ ಅರ್ಜಿ ಜೊತೆ ಲಗತ್ತಿಸಿರುವ ಆರ್.ಟಿ.ಸಿ.ಯ ವಿಸ್ತೀರ್ಣದ ವಿವರವನ್ನು ಈ ಕೆಳಗಿನ ಪಟ್ಟಿ-೨ ರಲ್ಲಿ ದಾಖಲಿಸುವುದು.

ಪಟ್ಟಿ - ೨

| ವಿಷಯ | ಆಕಾರಬಂದ್ | ಪಹಣಿ | |
|---|---|---|---|
| ಸರ್ವೆ ನಂಬರು | | | |
| ಒಟ್ಟು ವಿಸ್ತೀರ್ಣ | | | |
| ಖರಾಬು 'ಎ' ವಿಸ್ತೀರ್ಣ | | | |
| ಖರಾಬು 'ಬಿ' ವಿಸ್ತೀರ್ಣ | | | |
| ಸಾಗುವಳಿ ವಿಸ್ತೀರ್ಣ | | ಕಾಲಂ-೩ | ಕಾಲಂ -೯ |
| | | | |

ಪಟ್ಟಿ-೨ ರಲ್ಲಿ ದಾಖಲಿಸಿರುವ ಅಂಶಗಳಲ್ಲಿ ಯಾವುದಾದರು ಒಂದು ಅಂಶಗಳಲ್ಲಿ ಅಂದರೆ ಆಕಾರಬಂದ್ ಮತ್ತು ಆರ್.ಟಿ.ಸಿ. ವಿವರಗಳಿಗೆ ವ್ಯತ್ಯಾಸವಿದ್ದಲ್ಲಿ 11ಇ ನಕ್ಷೆ ವಿತರಣೆ ಮಾಡುವಾಗ ಸರಿಯಾಗಿ ಪರಿಶೀಲಿಸದೆ ನಿಯಮಗಳನ್ನು ಉಲ್ಲಂಘಿಸಿ ವಿತರಣೆ ಮಾಡಿರುವುದು ಕಂಡುಬರುತ್ತದೆ. ಇಂತಹ ಪ್ರಕರಣಗಳನ್ನು ದುರಸ್ತಿ ಪಡಿಸಲು ರಹವಿರದ ಕಾರಣ ಈ ಕೆಳಗಿನಂತೆ ಷರಾ ದಾಖಲಿಸಿ ವಿಲೇ ಪಡಿಸುವುದು.

ಷರಾ:- '11ಇ ನಕ್ಷೆ ವಿತರಣೆ ಮಾಡುವ ಸಮಯದಲ್ಲಿ ಆಕಾರಬಂದ್ ವಿವರ ಮತ್ತು ಆರ್.ಟಿ.ಸಿ. ವಿವರಗಳನ್ನು ಪರಿಶೀಲಿಸದೆ ವಿತರಿಸಿದ್ದು, ಆಕಾರಬಂದ್ ಮತ್ತು ಆರ್.ಟಿ.ಸಿ.ಯಲ್ಲಿ ವಿಸ್ತೀರ್ಣಗಳ ವಿವರ ತಾಳೆಯಾಗದ ಕಾರಣ ದುರಸ್ತಿಪಡಿಸದೆ ವಿಲೆ ಪಡಿಸಿದೆ.'

<u>೩) ದುರಸ್ತಿಪಡಿಸುವ ಬಗ್ಗೆ:-</u>

1) ಪಟ್ಟಿ-1 ಹಾಗೂ ಪಟ್ಟಿ-೨ ರಲ್ಲಿನ ಅಂಶಗಳು ಎಲ್ಲವು ತಾಳೆಯಾಗುತ್ತಿದ್ದರೆ ಅಂತಹ ಪ್ರಕರಣಗಳನ್ನು ದುರಸ್ತಿ ಪಡಿಸುವುದು. ಹಿಸ್ಸಾ ಟಿಪ್ಪಣಿ ಮತ್ತು ಪಕ್ಕಾ ಪುಸ್ತಕಗಳಲ್ಲಿ ಬ್ಲಾಕ್ ನಂಬರುಗಳನ್ನು ರೌಂಡ್ ಸುತ್ತಿ ಹಿಸ್ಸಾ ನಂಬರುಗಳನ್ನು ದಾಖಲಿಸುವುದು. ಅದರಂತೆ ಆಕಾರಬಂದ್ ಬರೆಯುವುದು ಮತ್ತು ಅಟ್ಲಾಸ್, ಫಾರಂ ನಂ. 10 ನ್ನು ತಯಾರಿಸುವುದು. ಆಕಾರಬಂದ್, ಅಟ್ಲಾಸ್, ಫಾರಂ ನಂ. 10 ಗಳನ್ನು ತಹಶೀಲ್ದಾರ್ ರವರಿಂದ ದೃಢೀಕರಿಸುವುದು. ನಂತರ ಫಾರಂ ನಂ.10 ಮತ್ತು ಅಟ್ಲಾಸ್ ಒಂದು ಪ್ರತಿಯನ್ನು 'ಭೂಮಿ' ಗೆ ಕಳುಹಿಸುವುದು. ಭೂಮಿಯಲ್ಲಿ ಮ್ಯುಟೇಷನ್ ಪೋಡಿಯನ್ನು ಆಯ್ಕೆ ಮಾಡಿಕೊಂಡು ಪೋಡಿ ವಿವರವನ್ನು ದಾಖಲಿಸುವುದು. ಪೋಡಿ ಮ್ಯುಟೇಷನ್‌ನ್ನು ಭೂಮಿ ಆರ್.ಆರ್.ಶಿರಸ್ತೆದಾರ್ ಅಂಗೀಕಾರ ಮಾಡಿದಾಗ ಹೊಸ ಹಿಸ್ಸಾ ನಂಬರುಗಳಂತೆ ಆರ್.ಟಿ.ಸಿ ಮೂಡುತ್ತದೆ.

(೨) ಪಟ್ಟಿ – 1 ಹಾಗೂ ಪಟ್ಟಿ– ೨ ರಲ್ಲಿನ ಅಂಶಗಳೆಲ್ಲವು ತಾಳೆಯಾಗುತ್ತಿರುವ ಪ್ರಕರಣಗಳನ್ನು ದುರಸ್ತಿ ಪಡಿಸಬೇಕು. ಆದರೆ ಈ ರೀತಿಯಾಗಿ ದುರಸ್ತಿ ಪಡಿಸುವಾಗ ತಯಾರಿಸಿ ವಿತರಿಸುವ 11ಇ ನಕ್ಷೆಗಳಲ್ಲಿ ತಾಂತ್ರಿಕ ನ್ಯೂನ್ಯತೆಗಳು ಕಂಡು ಬಂದು ದುರಸ್ತಿ ಪಡಿಸಲು ಅಡಚಣೆಯಾದರೆ ಅಂತಹ ಪ್ರಕರಣಗಳನ್ನು ತಿದ್ದುಪಡಿ ಮಾಡಿ ದುರಸ್ತಿಪಡಿಸಬಾರದು.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಅಂದರೆ ಪಟ್ಟಿ-1 ಮತ್ತು ಪಟ್ಟಿ-೨ ರಲ್ಲಿನ ಎಲ್ಲಾ ಅಂಶಗಳಲ್ಲಿ ದುರಸ್ತಿಪಡಿಸುವ ಸಮಯದಲ್ಲಿ ಸರಿಯಿದ್ದು ದುರಸ್ತಿಗೆ ಒಳಪಡಿಸುವ 11ಇ ಕಡತಗಳಲ್ಲಿ ಈ ಕೆಳಕಂಡ ತಾಂತ್ರಿಕ ಅಡಚಣೆಗಳು ಕಂಡುಬಂದಲ್ಲಿ ದುರಸ್ತಿ ಪೂರ್ಣಗೊಳಿಸಬಾರದು.

ತಾಂತ್ರಿಕ ನ್ಯೂನತೆಗಳು:-

1. ಪಾಲಿನ ಪದ್ಧತಿಯಂತೆ ತುಟಾಯಿಸಿ 11ಇ ನಕ್ಷೆಯಲ್ಲಿ ದಾಖಲಿಸಿರುವ ಮಾಪುಗಳ ಮೂಲ ದಾಖಲೆಗಳೊಂದಿಗೆ ತಾಳೆ ಇರದ ಪಕ್ಷದಲ್ಲಿ ಬದಲಿಸಿ ದುರಸ್ತಿಪಡಿಸಬಾರದು.
೨. ಬ್ಲಾಕುಗಳನ್ನು ವಿಂಗಡಿಸುವಾಗ ಕ್ರಯಕ್ಕೆ ಪಡೆದವರಿಗೆ ಒಂದು ಬ್ಲಾಕ್ ಉಳಿಕೆ ಎಲ್ಲ ಹಕ್ಕುದಾರರನ್ನು ಒಂದೆ ಬ್ಲಾಕ್‌ನಲ್ಲಿ ದಾಖಲಿಸಿದಾಗ
3. ಬ್ಲಾಕುಗಳಿಗೆ ಹಕ್ಕುದಾರರ ಹೆಸರನ್ನು ದಾಖಲಿಸದೆ ಆರ್.ಟಿ.ಸಿ.ಯಂತೆ ಖಾಯಂ ಎಂದು ದಾಖಲಿಸಿರುವ ಪ್ರಕರಣಗಳು
4. ಒಂದೆ ಸರ್ವೆ ನಂಬರಿನಲ್ಲಿ ಒಂದಕ್ಕಿಂತ ಹೆಚ್ಚಿಗೆ 11ಇ ನಕ್ಷೆ ವಿತರಣೆಯಾಗಿದ್ದು, ಇವುಗಳಲ್ಲಿ
   ಎ)ದಾಖಲಿಸಿರುವ ಬಾಂದು ಮಾಪುಗಳು ವ್ಯತ್ಯಾಸವಿದ್ದು
   ಬಿ)ಒಂದರ ಮೇಲೆ ಒಂದು ಅತಿವ್ಯಾಪ್ತಿಯಾಗುತ್ತಿದ್ದು
   ಸಿ)ಎಲ್ಲ ಬ್ಲಾಕುಗಳ ವಿಸ್ತೀರ್ಣ ಹಕ್ಕುಗಾರಿಕೆ ವಿಸ್ತೀರ್ಣಕ್ಕಿಂತ ಹೆಚ್ಚಾಗಿರುವುದು
5. ಬ್ಲಾಕುಗಳಲ್ಲಿ ದಾಖಲಿಸಿರುವ ಬಾಬು ಪೋಡಿ ವ್ಯತ್ಯಾಸವಾಗಿದ್ದಲ್ಲಿ

ತಾಂತ್ರಿಕ ನ್ಯೂನತೆಗಳು ಕಂಡುಬಂದಲ್ಲಿ ಅಂತಹ ಪ್ರಕರಣಗಳನ್ನು ದುರಸ್ತಿಪಡಿಸಿದೆ, ಷರಾ ದಾಖಲಿಸಿ ವಿಲೇ ಪಡಿಸುವುದು.

ಷರಾ:- **'11ಇ ನಕ್ಷೆಯ ವಿತರಣೆ ಕಾಲದಲ್ಲಿ 11ಇ ನಕ್ಷೆಯಲ್ಲಿರುವ ತಾಂತ್ರಿಕ ನ್ಯೂನತೆಯನ್ನು ಗಮನಿಸದೆ ವಿತರಣೆಯಾಗಿದ್ದು, 11ಇ ನಕ್ಷೆಯಲ್ಲಿ ತಾಂತ್ರಿಕ ನ್ಯೂನತೆ ಇರುವ ಕಾರಣ ದುರಸ್ತಿಗೆ ಒಳಪಡಿಸದೆ ಈ ಕಡತವನ್ನು ವಿಲೇ ಪಡಿಸಿದೆ.'**

3) ಹಲವು ಬಾರಿ ಮ್ಯುಟೇಷನ್ ಅಂಗೀಕಾರವಾಗಿರುವ ದಾಖಲೆಗಳ ಪೈಕಿ ಕೆಲವು 11ಇ ಕಡತಗಳ ಬಾಬ್ತು , ಸರ್ವೆ ದಾಖಲೆಗಳಲ್ಲಿ ಈಗಾಗಲೇ ದುರಸ್ತಿ ಪಡಿಸಿಕೊಳ್ಳಲಾಗಿರುತ್ತದೆ. ಆದರೆ ದುರಸ್ತಿ ಮಾಹಿತಿಯನ್ನು ಭೂಮಿಯಲ್ಲಿ ಇಂಡೀಕರಿಸಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಒಂದು ಪ್ರತಿ ಅಟ್ಲಾಸ್ ಮತ್ತು ಫಾರಂ ನಂ. 10 ಪ್ರತಿಯನ್ನು 'ಭೂಮಿ' ಗೆ ಕಳುಹಿಸಿ, ಮ್ಯುಟೇಷನ್ ಪೋಡಿ ಪ್ರಕರಣವನ್ನು ಪ್ರಾರಂಭಮಾಡುವುದು ಮತ್ತು ಪೋಡಿ ವಿವರಗಳನ್ನು ಅಳವಡಿಸಿ ಪೋಡಿ ಮ್ಯುಟೇಷನ್ ಅನ್ನು ಭೂಮಿ ಶಿರಸ್ತೆದಾರರಿಂದ ಅಂಗೀಕರಿಸುವುದು. ಅದರಂತೆ ಹೊಸ ಹಿಸ್ಸಾ ನಂಬರುಗಳಂತೆ ಭೂಮಿಯ ಪಹಣಿ ಯನ್ನು ತಯಾರುಮಾಡುವುದು.

4) ದುರಸ್ತಿಗೆ ಒಳಪಡಿಸುವ ಮುನ್ನ 11ಇ ನಕ್ಷೆ ಕೀ ರಿಜಿಸ್ಟರ್ ಮತ್ತು ಮ್ಯುಟೇಷನ್ ಆಗಿರುವ ಕಡತಗಳನ್ನು ಪರಿಶೀಲಿಸಿದ ಬಗ್ಗೆ ಕೇಂದ್ರ ಕಛೇರಿಗೆ ಇದುವರೆಗೂ ವಿತರಿಸಿರುವ 11ಇ ನಕ್ಷೆಗಳ ಸಮಗ್ರ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಬೇಕಾಗಿರುವ ಕಾರಣ. ಈ ಕೆಳಗಿನ ಕೋಷ್ಟಕವನ್ನು ಭರ್ತಿ ಮಾಡಿ ಕೂಡಲೇ ಸಲ್ಲಿಸುವುದು.

ಪರಿಶೀಲನ ವರದಿ

| ವರ್ಷ | ವಿತರಿಸಿರುವ ಒಟ್ಟು 11ಇ ನಕ್ಷೆಗಳು | ಇದುವರೆಗೂ ಮ್ಯುಟೇಷನ್ ಪ್ರಕ್ರಿಯೆಗೆ ಒಳಪಡದ ನಕ್ಷೆಗಳ ಸಂಖ್ಯೆ | ಮ್ಯುಟೇಷನ್ ತಿರಸ್ಕಾರ ವಾಗಿರುವ 11ಇ ನಕ್ಷೆಗಳ ಸಂಖ್ಯೆ | ಮ್ಯುಟೇಷನ್ ಅಂಗೀಕಾರ ವಾಗಿರುವ 11ಇ ನಕ್ಷೆಗಳ ಸಂಖ್ಯೆ | ಮ್ಯುಟೇಷನ್ ಅಂಗೀಕಾರ ವಾಗಿರುವ ಪ್ರಕರಣಗಳ ಬಾಬ್ತು ತಪ್ಪಾಗಿ 11ಇ ನಕ್ಷೆಗಳ ವಿತರಣೆ ಮಾಡಿರುವ ಸಂಖ್ಯೆ (ಪೈಕಿ ಪಹಣಿ , ಕಾಲಂ-3 ಹಾಗೂ ಕಾಲಂ 9 ತಾಳೆ ಇರದ ಸಂಖ್ಯೆ) | ಪೋಡಿಗೆ ಒಳ ಪಡುವ 11ಇ ನಕ್ಷೆ ಕಡತಗಳ ಸಂಖ್ಯೆ |
|---|---|---|---|---|---|---|
| | | 1968 | — | — | 1819 | 3488 |
| | | | | | | |
| | | | | | | |

√ 7275

ಇದುವರೆಗೂ ವಿತರಣೆ ಆಗಿದ್ದ 11 ಇ ನಕ್ಷೆಗಳ ಬಾಬ್ತು ದುರಸ್ತಿಗೆ ಒಳಪಡಿಸಿದ ಕಡತಗಳ ಬಾಬ್ತು ಈ ಕೆಳಗಿನ ಕೋಷ್ಟಕವನ್ನು ಭರ್ತಿ ಮಾಡಿ ದುರಸ್ತಿ ಕಾರ್ಯ ಪೂರೈಸಿದ ನಂತರ ವರದಿಸುವುದು.

**<u>11ಇ ನಕ್ಷೆಗಳ ಪೋಡಿ ದುರಸ್ತಿ ವರದಿ</u>**

| ಕ್ರಮ ಸಂಖ್ಯೆ | ವರ್ಷ | ಪೋಡಿಗೆ ಒಳಪಡುವ 11ಇ ನಕ್ಷೆ ಕಡತಗಳು | ತಾಂತ್ರಿಕ ನ್ಯೂನ್ಯತೆಯಿಂದ ದುರಸ್ತಾಗದ 11ಇ ಕಡಗಳು | ದುರಸ್ತಾದ 11ಇ ಕಡತಗಳು |
|---|---|---|---|---|
| | | | | |
| | | | | |

3/4/09

ಆಯುಕ್ತರು
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

3.4.09

**<u>ಪ್ರತಿಯನ್ನು:-</u>**

1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.